ಬೆಂಗಳೂರು ಡಿವೀಜ್ಯ ಡಿಸ್ಟ್ರಿಕ್ಟ್ಸ ಜಡ್ಜ್ಸರವರ ಕೋರ್ಟ್‌ನಲ್ಲಿ.

ಸ್ಯ 1903—1904ನೆ ಇಸವಿ ಅರ್ಜೀ ನಂಬರ 202.

ಮೃತಪಟ್ಟ ಕುರುಬರ ಸುಬ್ಬಕ್ಕ ವುರಫ್ ನಾಗಿ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬಾಗೇಪಲ್ಲಿ ತಾ|| ಮುದ್ದಿರಡ್ಡಿಪಲ್ಲಿಯಲ್ಲಿರುವ 1ನೆ ಗುಮ್ಮಗಾಳಿ ಸುಬ್ಬ, 2ನೆ ವೇಮನ, ಮೃತಪಟ್ಟ ಸದರೀ ಕುರುಬರ ಸುಬ್ಬಕ್ಕ ವುರಫ್ ನಾಗ್ಗಿ ಎಂಬವರಿಗೆ ಮುಖ್ಯ ವಾರಸ್ದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಬಾಗೇಪಲ್ಲಿ ತಾ|| ಹೊಸ ಹುಡ್ಯದಲ್ಲಿ ವಾಸಸ್ಥರಾಗಿ ಮೃತಪಟ್ಟ ಕುರುಬರ ಸುಬ್ಬಕ್ಕ ವುರಫ್ ನಾಗಿ ಎಂಬುವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1901ನೆ ಇಸವಿ 7ನೆ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಗುಮ್ಮಗಾಳಿ ಸುಬ್ಬ, 2ನೆ ವೇಮಗ ಎಂಬುವರ ಅರ್ಜಿಯನ್ನು ಸ್ಯ 1904ನೆ ಇಸವಿ ಫೆಬ್ರುವರಿ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುರುಬರ ಸುಬ್ಬಕ್ಕ ವುರಫ್ ನಾಗಿ ಎಂಬುವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1903ನೆ ಇಸವಿ ಡಿಸೆಂಬರು ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ವೊಹರ್‌ನಿಸಿ ನನ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1903—1904ನೆ ಇಸವಿ ಅರ್ಜೀ ನಂಬರ 214.

ಮೃತಪಟ್ಟ ಆಲಗಿರಿ ತಿಮ್ಮದಾಸಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಜವ್ವಜ್ಜಿಯ್ಯನ ಪ್ಯಾಟೇಲಿರುವ ಹನುಮಂತಪ್ಪ ಮೂಗ್ಗ, ಗಾರ್ಡಿಯರ್ ಹೆಂಡತಿ ಸಂಕಮ್ಮ, ಮೃತಪಟ್ಟ ಸದರೀ ಆಲಗಿರಿ ತಿಮ್ಮದಾಸಪ್ಪನವರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಆಲಗಿರಿ ತಿಮ್ಮದಾಸಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹನುಮಂತಪ್ಪ ಮೂಗ್ಗ, ಗಾರ್ಡಿಯರ್ ಹೆಂಡತಿ ಸಂಕಮ್ಮನವರ ಅರ್ಜಿಯನ್ನು ಸ್ಯ 1904ನೆ ಇಸವಿ ಫೆಬ್ರುವರಿ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಆಲಗಿರಿ ತಿಮ್ಮದಾಸಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1903ನೆ ಇಸವಿ ಡಿಸೆಂಬರ್ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ವೊಹರ್‌ನಿಸಿ ನನ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಆರ್. ಸುಬ್ರಾಯ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಸಬ್ ಜಡ್ಜ್ಸರವರ ಕೋರ್ಟ್‌ನಲ್ಲಿ.

ಸ್ಯ 1902—1903ನೆ ಇಸವಿ ಮಿಸ್ ಅರ್ಜೀ ನಂಬರ್ 736.

ಅರ್ಜೀದಾರು ಬೆಂಗಳೂರು ಲಾಲ್‌ಬಂದು ಪೇಟೇಲಿ ಕೊತೆಸಾಬಿ ಮಖಾ ಬಳಿ ಇರುವ ಖಾಸಿಂಬಿ, ವೈನರಾದ ಬೆಂಗಳೂರು ಲಾಲ್‌ಬಂದು ಪ್ಯಾಟೆಯಲ್ಲಿರುವ ಅಬ್ದುಲ್‌ರಹಿಮ್ಮಾ ಮತ್ತು ಅಬ್ದುಲ್ ಬಸೀದು ಆಸ್ತೀ ವಿಷಯದಲ್ಲಿ—

ಸದರೀ ವೈನರಾದ ಅಬ್ದುಲ್‌ರಹಿಮ್ಮಾ ಅಬ್ದುಲ್‌ಬಶೀದುಯವರಿಗೆ ಚಿಕ್ಕ ತಾಯಿ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರಲ್ಲಿ ಇರುವ ಗಡವ'ಖಾ ಎಂಬವರಿಗೆ ಸದರೀ ವೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಕೊಡಬೇಕೆಂದು ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ಯ 1903ನೆ ಇಸವಿ ಡಿಸೆಂಬರ್ ತಾರೀಖು 18ರಲ್ಲು ವೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ಯ 1903ನೆ ಇಸವಿ ಡಿಸೆಂಬರು ತಿಂಗಳು 9ನೆ ತಾರೀಖಿನಲ್ಲಿ ಕೋರ್ಟು ವೊಹರ್ ನನ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಪಿ. ತಿಂಗ್ಯಾಚಾರ್,
ಸಬ್ ಜಡ್ಜ್.

ಅಮೃತಮಹಲ್ ಇಲಾಖೆ.

ನೋಟಿಫಿಕೇಷನ್.

ತಾರೀಖು 10—11ನೆ ಡಿಸೆಂಬರ್ 1903, ವೊಕ್ಕಾಂ ಮೈಸೂರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸೀಮೆಯ ಅಮೃತಮಹಲ್ ಇಲಾಖೆಯ ಕೆಲವು ಗಂಡು ದನುಗಳನ್ನು ಮತ್ತು ಕೆಲವು ಹೆಂಣು ರಾಸುಗಳನ್ನು ಹಾಸನದ ತಾಲ್ಲೂಕು ಸೋಮನಹಳ್ಳಿ ಕಾವಲಿನಲ್ಲಿ ಹರಾಜ್ಮಾಡಿಸುವದೆಂದು ಹೋದವಾರದ ಗೆಜೆಟಿನಲ್ಲಿ ಘಾಯಿಷ್ಮಾಡಿರುವದು ಸರಿಯಷ್ಟೆ—ಇದರಂತೆ ಸದರಿ ಹರಾಜನ್ನು ಮಾಡಿಸಲು ಅನುಕೂಲವಿಲ್ಲವಾದ್ದರಿಂದ ಈಗ ಅದನ್ನು ಮನ್ನಾಮಾಡಿರುತ್ತೆ ತಿಳಿಯುವದು.

ಹೆಚ್. ನಂಜುಂಡರಾಜೆ ಅರಸ್,
ಸೂಪರ್‌ಟೆಂಡೆಂಟ್.